ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ : 902
2. ಸದಸ್ಯರ ಹೆಸರು : ಶ್ರೀ ವಿಜಯ್‌ಸಿಂಗ್
3. ಉತ್ತರಿಸುವ ದಿನಾಂಕ : 21.12.2021
4. ಉತ್ತರಿಸುವ ಸಚಿವರು : ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕಳೆದ ವರ್ಷ ಜಿಲ್ಲಾಡಳಿತ ನಿಗದಿಪಡಿಸಿದ ದರದಂತೆ ಬೀದರ್ ಜಿಲ್ಲೆಯ ಯಾವುದೇ ಸಕ್ಕರೆ ಕಾರ್ಖಾನೆಗಳು ರೈತರಿಗೆ ಹಣ ಪಾವತಿ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕೇಂದ್ರ ಸರ್ಕಾರವು ಕಬ್ಬಿಗೆ ನಿಗದಿಪಡಿಸಿರುವ ನ್ಯಾಯಯುತ ಮತ್ತು ಲಾಭದಾಯಕ ದರದ (ಎಫ್.ಆರ್.ಪಿ.) ಮೇಲೆ ಜಿಲ್ಲಾಡಳಿತದಿಂದ ಪ್ರತ್ಯೇಕವಾಗಿ ಕಬ್ಬಿಗೆ ದರ ನಿಗದಿಪಡಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. |
| (ಆ) | ರೈತರಿಗೆ ಕಬ್ಬಿನ ದರ ರೂ.2450/- ನೀಡುವುದಾಗಿ ತಿಳಿಸಿ ಈಗ ರೂ.1950/- ಮಾತ್ರ ನೀಡಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಪ್ರಸ್ತುತ ರೈತರಿಗೆ ನೀಡುತ್ತಿರುವ ಕಬ್ಬಿನ ದರ ಎಷ್ಟು? | ಕೇಂದ್ರ ಸರ್ಕಾರದ ಆಹಾರ ಮತ್ತು ಸಾರ್ವಜನಿಕ ವಿತರಣೆ ಇಲಾಖೆಯ ಪತ್ರ ಸಂಖ್ಯೆ: NO.3(1)2019-SP-I ದಿನಾಂಕ:26.08.2020ರಲ್ಲಿ 2020-21ನೇ ಸಾಲಿನಲ್ಲಿ ಸಕ್ಕರೆ ಕಾರ್ಖಾನೆಗಳಿಗೆ ಸರಬರಾಜಾಗುವ ಕಬ್ಬಿಗೆ ಮೊದಲನೇ ಕಂತಿನ ರೂಪದಲ್ಲಿ ಪಾವತಿಸಬೇಕಾದ ನ್ಯಾಯ ಮತ್ತು ಲಾಭಾದಾಯಕ ಬೆಲೆಯನ್ನು (ಎಫ್.ಆರ್.ಪಿ) ಘೋಷಿಸಲಾಗಿದೆ. ಸದರಿ ಪತ್ರದಲ್ಲಿ ನಿಗದಿಪಡಿಸಿದ ಮಾನದಂಡಗಳ ಆಧಾರದ ಮೇಲೆ 2020-21ನೇ ಹಂಗಾಮಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳು ನುರಿಸುವ ಪ್ರತಿ ಮೆ. ಟನ್ ಕಬ್ಬಿಗೆ ರೈತರಿಗೆ ಪಾವತಿಸಬೇಕಾದ ಎಫ್.ಆರ್.ಪಿ. ದರವನ್ನು ನಿಗದಿಗೊಳಿಸಿ, ಆದೇಶ ಸಂಖ್ಯೆ: ಡಿಎಸ್‌ಕೆ/ಎಸ್ ಕೆ/19/2020-21 ದಿನಾಂಕ: 02.11.2020ರಲ್ಲಿ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು ಆದೇಶ ಹೊರಡಿಸಿರುತ್ತಾರೆ.<br>ಬೀದರ್ ಜಿಲ್ಲೆಯಲ್ಲಿ 2020-21ನೇ ಸಾಲಿನಲ್ಲಿ ಸಹಕಾರಿ ವಲಯದ 2 ಹಾಗೂ ಖಾಸಗಿ ವಲಯದ 2 ಹೀಗೆ ಒಟ್ಟು 4 ಸಕ್ಕರೆ ಕಾರ್ಖಾನೆಗಳು ಕಾರ್ಯನಿರ್ವಹಿಸಿವೆ. ಈ ಕಾರ್ಖಾನೆಗಳಿಂದ ಪ್ರತಿ ಟನ್ ಒಂದಕ್ಕೆ ರೂ.2708/-ರಂತೆ ನ್ಯಾಯಯುತ ಮತ್ತು ಲಾಭಾದಾಯಕ ಬೆಲೆಯನ್ನು (ಎಫ್.ಆರ್.ಪಿ.) ರೈತರಿಗೆ ಪಾವತಿಸಲಾಗಿದೆ. |

......2

| | | |
|---|---|---|
| | | ಕೇಂದ್ರ ಸರ್ಕಾರವು ನಿಗದಿಪಡಿಸಿರುವ ಎಫ್.ಆರ್.ಪಿ. ದರವು ಕಬ್ಬು ಕಟಾವು ಮತ್ತು ಸಾಗಾಣಿಕೆ ದರಗಳನ್ನು ಸಹ ಒಳಗೊಂಡಿರುತ್ತದೆ. ಬೀದರ್ ಜಿಲ್ಲೆಯ 4 ಸಕ್ಕರೆ ಕಾರ್ಖಾನೆಗಳು ಕಬ್ಬು ಸರಬರಾಜು ಮಾಡಿದ ರೈತರಿಗೆ ಪ್ರತಿ ಮೆ. ಟನ್ ಒಂದಕ್ಕೆ ರೂ.1950/-ಗಳನ್ನು ಕಬ್ಬು ಬಿಲ್ಲು ಮೊತ್ತವಾಗಿ ಹಾಗೂ ರೂ.758/-ಗಳನ್ನು ಕಬ್ಬು ಕಟಾವು ಮತ್ತು ಸಾಗಾಣಿಕೆ ದರವಾಗಿ ಪಾವತಿಸಿರುತ್ತವೆ.<br>2020-21ನೇ ಸಾಲಿನಲ್ಲಿ ನಾಲ್ಕು ಸಕ್ಕರೆ ಕಾರ್ಖಾನೆಗಳು ರೈತರ ಕಬ್ಬು ಬಿಲ್ಲು ಬಾಕಿಯನ್ನು ಪೂರ್ಣವಾಗಿ ತೀರುವಳಿ ಮಾಡಿರುತ್ತವೆ. ಎಫ್.ಆರ್.ಪಿ.ಯಂತೆ ಪಾವತಿಸಲು ಬಾಕಿ ಇರುವುದಿಲ್ಲ.<br>ಕೇಂದ್ರ ಸರ್ಕಾರದ ದಿನಾಂಕ:31.08.2021ರ ಪತ್ರದಲ್ಲಿ 2021-22ನೇ ಸಾಲಿನ ಎಫ್.ಆರ್.ಪಿ ದರವನ್ನು ಘೋಷಿಸಲಾಗಿದ್ದು, ಸದರಿ ಪತ್ರದಲ್ಲಿನ ಮಾನದಂಡಗಳಂತೆ 2021-22ನೇ ಸಾಲಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳು ಕಬ್ಬು ಸರಬರಾಜು ಮಾಡಿದ ರೈತರಿಗೆ ಪಾವತಿಸಬೇಕಾದ ನ್ಯಾಯುಯತ ಮತ್ತು ಲಾಭಾದಾಯಕ ಬೆಲೆಯನ್ನು (ಎಫ್.ಆರ್.ಪಿ) ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ದಿನಾಂಕ:29.10.2021ರ ಆದೇಶದಲ್ಲಿ ನಿಗದಿಪಡಿಸಲಾಗಿದೆ. ಈ ಆದೇಶದಲ್ಲಿ ಬೀದರ್ ಜಿಲ್ಲೆಯ ನಾಲ್ಕು ಸಕ್ಕರೆ ಕಾರ್ಖಾನೆಗಳಿಗೆ 2021-22ನೇ ಹಂಗಾಮಿನಲ್ಲಿ ಕಬ್ಬು ಸರಬರಾಜು ಮಾಡುವ ರೈತರಿಗೆ ಪಾವತಿಸಬೇಕಾದ ಎಫ್.ಆರ್.ಪಿ. ದರ ರೂ.2755.00 ಆಗಿರುತ್ತದೆ. |

**ಸಂಖ್ಯೆ: ಸಿಐ 131 ಎಸ್‌ಜಿಎಫ್ 2021**

(ಶಂಕರ ಬ.ಪಾಟೀಲ ಮುನೇನಕೊಪ್ಪ)
ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಸಚಿವರು